ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ತಮಗೆಲ್ಲಾ ಗೊತ್ತಿರುವ ಹಾಗೆ, ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಧ್ವಜಾರೋಹಣ ಮಾಡತಕ್ಕ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ, ಅದನ್ನು ತೀವ್ರವಾಗಿ ಮಾಡುತ್ತೇವೆ. ಎಕ್ಸಿಸ್ಟಿಂಗ್ ಇದರಲ್ಲಿ ಕೇಂದ್ರ ಸರ್ಕಾರದಿಂದ ಏನು ಸರ್ಕ್ಯುಲರ್ ಬಂದಿದೆ ಅದರ ಪ್ರಕಾರ ಈಗ ನಡೆಯುತ್ತಿದೆ. ಬೇರೆಯವರು ಎಂದರೆ ಜನರ ಪ್ರತಿನಿಧಿಗಳಾದ ಶಾಸಕರು ಮತ್ತು ವಿರೋಧ ಪಕ್ಷದ ನಾಯಕರು ಧ್ವಜಾರೋಹಣ ಮಾಡಬೇಕೆಂದು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಕೇಂದ್ರ ಸರ್ಕಾರದ ಒಂದು ತಿದ್ದುಪಡಿ ಬರುವವರಿಗೆ ಈ ರೀತಿ ಮಾಡಬೇಕು. ಇಲ್ಲಿಯತನಕ ಏನು ನಡೆದು ಬಂದಿದೆಯೆಂದರೆ, ತಹಶೀಲ್ದಾರರು ಧ್ವಜಾರೋಹಣ ಮಾಡುವಾಗ ಶಾಸಕರು ಪಕ್ಕದಲ್ಲಿ ಕುಳಿತುಕೊಳ್ಳಬೇಕು, ತಹಶೀಲ್ದಾರರು ಧ್ವಜಾರೋಹಣ ಮಾಡಿ ಪ್ರಜಾಪ್ರಭುತ್ವದ ಬಗ್ಗೆ ಭಾಷಣ ಮಾಡಬೇಕು ಎಂದು. ಇದು ಪ್ರಜಾಪ್ರಭುತ್ವಕ್ಕೆ ಅಪಮಾನ. ಆ ಕಾರಣ ಶಾಸಕರನ್ನು ಆ ಕಾರ್ಯಕ್ರಮಕ್ಕೆ ಆಮಂತ್ರಣ ಮಾಡಬಾರದು, ಶಾಸಕರನ್ನು ಪಕ್ಕದಲ್ಲಿ ಕೂರಿಸಿಕೊಂಡು ಪ್ರಜಾಪ್ರಭುತ್ವದ ಬಗ್ಗೆ ಭಾಷಣ ಮಾಡುವಂತಹ ಕಾರ್ಯಕ್ರಮ ಕೂಡ ನಡೆಯಬಾರದು. ಸರ್ಕಾರದವರು ಇದನ್ನಾದರೂ ಮಾಡುತ್ತೀರಾ?

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಈ ಕಾರ್ಯಕ್ರಮ ಇವತ್ತಿನದಲ್ಲ, ಬಹಳ ದಿನಸಗಳಿಂದ ನಡೆದು ಬಂದಿದೆ. ಅದನ್ನು ನಾನು ಒಪ್ಪುತ್ತಿದ್ದೇನೆ. ಯಾವ ಪ್ರಕಾರ ಮಾಡಬೇಕು ಎಂದು ಅದನ್ನು ವಿಚಾರ ಮಾಡುತ್ತೇನೆ.

ನಗರ ಪಾಲಿಕೆಯ ಪರಿಮಿತಿಯಲ್ಲಿ ಪರವಾನಿಗೆ ಪಡೆದ ಹಾಗೂ ಪಡೆಯದ ಜಾಹಿರಾತುಗಳು.

107(891) ಶ್ರೀ ಎ.ಕೆ. ಅನಂತ ಕೃಷ್ಣ (ಶಿವಾಜಿನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಪರವಾನಗಿ ಪಡೆದ ಮತ್ತು ಪರವಾನಗಿ ಪಡೆಯದ ಎಲ್ಲ ವರ್ಗದ ಎಷ್ಟು ಸಂಖ್ಯೆಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲಾಗಿದೆ;

ಆ) ಪರವಾನಗಿಯ ನಿಯಮಗಳಂತೆ ಫಲಕಗಳನ್ನು ನೆಲೆಗೊಳಿಸಲಾಗಿದೆಯೇ;

ಇ) ಸದರಿ ಫಲಕಗಳು ಪಾದಚಾರಿ ಮತ್ತು ವಾಹನ ಸಂಚಾರಕ್ಕೆ ಅಪಾಯ ತಂದೊಡ್ಡುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಈ) 1990-91 ಮತ್ತು 91-92ನೇ ಸಾಲಿಗೆ ಫಲಕಗಳಿಗಾಗಿ ಪರವಾನಗಿ ನೀಡಿದ ಬಗ್ಗೆ ನಗರ ಪಾಲಿಕೆಯು ಪಡೆದ ಆದಾಯವೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ)

	ಪರವಾನಗಿ ನೀಡಿರುವ ಫಲಕಗಳು	ಪರವಾನಗಿ ನೀಡದಿರುವ ಫಲಕಗಳು
1. ಹೋರ್ಡಿಂಗ್ಸ್ -	1360	54
2. ಅಂಗಡಿ ಜಾಹಿರಾತು ಫಲಕಗಳು -	9000	–
3. ಗೋಡೆ ಬರಹ -	125	–
4. ವಿದ್ಯುತ್ ಕಂಬಗಳ ಮೇಲೆ ಇರುವ ಕಿಯಾಸ್ಕ್‌ಗಳು ಕ.ವಿ.ಮ. ಅನುಮತಿ ನೀಡಿರುತ್ತಾರೆ. -	2200	–
5. ರಸ್ತೆ ಬದಿ ಇರುವ ಕಂಬಗಳ ಮೇಲೆ ಅಳವಡಿಸಿರುವ ಫಲಕಗಳ ಅನುಮತಿ ಅವಧಿ ಮುಗಿದಿರುತ್ತದೆ. -	4000	–

ಆ) ಇಲ್ಲ, ಕೆಲವು ಜಾಹಿರಾತು ಫಲಕಗಳನ್ನು ಜಾಹಿರಾತು ನಿಯಮದಂತೆ ಅಳವಡಿಸಿರುವುದಿಲ್ಲ, ಅಂತಹ ಫಲಕಗಳನ್ನು ತೆಗೆದುಹಾಕಲಾಗುತ್ತಿದೆ.

ಇ) - ಇಲ್ಲ -

ಈ)

ವರ್ಷ	ನೆಲಬಾಡಿಗೆ	ಜಾಹಿರಾತು ಬಾಡಿಗೆ
1990–91	43,043–00	5,05,629–75
1991–92	10,37,883–00	6,29,483–45

ಶ್ರೀ ಎ.ಕೆ. ಅನಂತ ಕೃಷ್ಣ:- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಅತಿ ವೇಗವಾಗಿ ಹೆಚ್ಚಾಗಿ ನಗರ ಸಂಚಾರ ಜಾಸ್ತಿಯಾಗುತ್ತಿರುವಂತಹ ಕಾಲದಲ್ಲಿ ಈ ಹೋರ್ಡಿಂಗ್ ಜಾಸ್ತಿಯಾಗುತ್ತಿದೆ, ಇದರಿಂದ ಟ್ರಾಫಿಕ್ ಜಾಸ್ತಿಯಾಗುತ್ತದೆಂದು ಟ್ರಾಫಿಕ್ ಡಿಪಾರ್ಟ್‌ಮೆಂಟ್‌ನವರ ಅಭಿಪ್ರಾಯವಿದೆ. ಸಾರ್ವಜನಿಕರದ್ದೂ ಅಭಿಪ್ರಾಯವಿದೆ. ಇಲ್ಲಿ ಒಂದು ಪ್ರಶ್ನೆಗೆ Whether the Government is aware that the said hoardings are causing considerable pedestrian and traffic hazards? ಎಂದು ಕೇಳಿದ್ದಕ್ಕೆ 'No' ಎಂದು ಹೇಳಿದ್ದೀರಿ. ಇದು ಬೆಂಗಳೂರು ನಗರದ ವಿಷಯದಲ್ಲಿ ಎಷ್ಟು ಆರ್ಬಿಟ್ರರಿಯಾದಂಥ ಉತ್ತರ! ಫುಟ್‌ಪಾತ್ ಮೇಲೆ ಎನ್‌ಕ್ರೋಚ್ ಆಗಿ ಹೋರ್ಡಿಂಗ್ಸ್ ನೂರಾರು ಇದೆ. ಅದನ್ನು ಯಾರೂ ಕೇಳುವವರೇ ಇಲ್ಲ. ಒಂದು ಕಡೆ 7-8 ಹೋರ್ಡಿಂಗ್ಸ್ ಒಂದರ ಮೇಲೆ ಒಂದು, ಒಂದರ ಪಕ್ಕ ಒಂದು ಒಂದರ ಹಿಂದೆ ಒಂದು ಹೀಗೆ ಬೆಳೆದುಕೊಂಡು ಬರುತ್ತಿದೆ. ನಮ್ಮ ಜನಸಂಖ್ಯೆ ಹೇಗೆ ಬೆಳೆಯತ್ತಿದೆಯೋ ಹಾಗೆಯೇ ಹೋರ್ಡಿಂಗ್ಸ್ ಬೆಳೆದುಕೊಂಡು ಬರುತ್ತಿದೆ. ಇದರಿಂದ ಬಹಳ ತೊಂದರೆಯಾಗುತ್ತದೆಯೆಂದು ಕೇಳಿದರೆ, ಬಹಳ ಕ್ಯಾಶುಯಲ್ಲಾಗಿ ಒಂದು ರಿಪ್ಲೈ ಕೊಟ್ಟಿದ್ದಾರೆ. ಅದು ಮಾನ್ಯ ಮಂತ್ರಿಗಳ ಗಮನಕ್ಕೆ ಏತಕ್ಕೆ ಬಂದಿಲ್ಲವೆಂದು ಹೇಳಲಿಲ್ಲ.

ಶ್ರೀ ಕೆ.ಜೆ. ಜಾರ್ಜ್:- ಸನ್ಮಾನ್ಯ ಅಧ್ಯಕ್ಷರೇ, ಈ ಹೋರ್ಡಿಂಗ್ಸ್ ಕೊಡುವಾಗ ಬೈಲಾ ನೋಡಿ ಕೊಡುತ್ತಿದ್ದೇವೆ. ಈಗ ಏನಾಗಿದೆಯೆಂದರೆ ಕೆಲವೊಂದು ಅನ್‌ಆಥರೈಸ್ಡ್ ಹೋರ್ಡಿಂಗ್ಸ್ ಇದೆ. ಕೆಲವೊಂದು ಡಿಫೆನ್ಸ್ ಲ್ಯಾಂಡ್‌ನಲ್ಲಿ ಇದೆ. ಕೆಲವೊಂದು ರೈಲ್ವೆ ಲ್ಯಾಂಡ್‌ನಲ್ಲಿದೆ. ಡಿಫೆನ್ಸ್‌ನವರು ಹಾಗೂ ರೈಲ್ವೆಯವರು ನಮ್ಮ ಸರ್ಮಿಶನ್ ಕೇಳದೆ ಹೋರ್ಡಿಂಗ್ಸ್ ಹಾಕುತ್ತಿದ್ದಾರೆ. ಈ ವಿಚಾರದಲ್ಲಿ ಈಗಾಗಲೇ ನಮ್ಮ ಚೀಫ್ ಸೆಕ್ರೆಟರಿಯವರು ಡಿಫೆನ್ಸ್ ಸೆಕ್ರೆಟರಿಗೆ ಕಾಗದ ಬರೆದಿದ್ದಾರೆ. ಈ ಹೋರ್ಡಿಂಗ್ಸ್‌ಗಳನ್ನು ಒಂದೊಂದು ವರ್ಷಕ್ಕೆ ರಿನ್ಯೂವಲ್ ಮಾಡುತ್ತಿದ್ದೇವೆ. ಈ ವರ್ಷ ಇದರ ಬಗ್ಗೆ ಈಗಾಗಲೇ ಕಮಿಷನರ್‌ರವರೊಂದಿಗೆ ಚರ್ಚೆ ಮಾಡಿದ್ದೇವೆ. ಎಲ್ಲೆಲ್ಲಿ ಬೈಲಾ ಪ್ರಕಾರ ಇದೆ ಅಲ್ಲಿಗೆ ಮಾತ್ರ ಕೊಡಬೇಕು, ಮತ್ತೆ ಕೊಡುವಾಗ ಅರ್ಬನ್ ಲ್ಯಾಂಡ್ಸ್ ಕಮಿಷನ್‌ನವರು ಏಷ್ಟೋ ರೋಡ್‌ಗಳ ವಿಚಾರದಲ್ಲಿ ಬ್ಯೂಟಿಫಿಕೇಷನ್ ವಿಚಾರದಲ್ಲಿ ಮೇಲ್ವಿಚಾರಣೆ ನೋಡುತ್ತಿದ್ದಾರೆ. ಎಂ.ಜಿ. ರೋಡ್, ರೆಸಿಡೆನ್ಸಿ ರೋಡ್, ನಿಧಾನ ಬೀದಿ ಇಂತಹ ರೋಡ್‌ಗಳಲ್ಲಾ ಅರ್ಬನ್ ಲ್ಯಾಂಡ್ಸ್ ಕಮಿಷನ್ ಕೆಳಗಡೆ ಬರುತ್ತವೆ. ಅಲ್ಲಿ ಯಾವುದಾದರೂ ಹೋರ್ಡಿಂಗ್ಸ್ ಹೊಸದಾಗಿ ರಿನ್ಯೂವಲ್ ಮಾಡಬೇಕಾದರೆ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಬೇಕೆಂದು ಹೇಳಿದ್ದೇನೆ. ಮತ್ತು ಬೇರೆ ರೋಡ್‌ಗಳಲ್ಲಿಯೂ ಸಹ ಮಾನ್ಯ ಸದಸ್ಯರು ಹೇಳಿದ ಹಾಗೆ, ಏನಾದರೂ ಟ್ರಾಫಿಕ್ ಅಡಚಣೆಯಾದರೆ ಟ್ರಾಫಿಕ್ ಪೋಲೀಸ್‌ನವರ ಪರ್ಮಿಷನ್ ತೆಗೆದುಕೊಂಡು ಇನ್ನು ಮುಂದೆ ಹೋರ್ಡಿಂಗ್ಸ್ ಕೊಡಬೇಕೆಂದು ಈಗಾಗಲೇ ನಾವು ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಎ.ಕೆ. ಅನಂತ ಕೃಷ್ಣ:- ಈ ಹೋರ್ಡಿಂಗ್ಸ್ ಎನ್ನುವಂಥಾದ್ದು 2 ಅಡಿ 3 ಅಡಿ ಫುಟ್‌ಪಾತ್‌ನಲ್ಲೂ ಕೂಡ ಬಹಳ ಮಟ್ಟಿಗೆ ಎನ್‌ಕ್ರೋಚ್ ಆಗಿದೆ. ಜನ ಅಲ್ಲಿಂದ ಕ್ರಾಸ್ ಮಾಡುವುದಕ್ಕಾಗುವುದಿಲ್ಲ. ಅದು ಒಂದು ಮತ್ತು ಖಾಸಗೀ ಪ್ರಾಪರ್ಟೀಸ್ ಏನು ಇದೆ ಅಲ್ಲಂತೂ ಹೇಳತೀರದು. ಅದರಲ್ಲೂ ಟ್ರಾಫಿಕ್ ಕಾರ್ನರ್ಸ್ ಜಂಕ್ಷನ್ಸ್ ಎಲ್ಲಿ ಬರುತ್ತದೆ ಅಲ್ಲಿ ಮತ್ತು ಮಹಡಿ ಮೇಲೆ ಕೂಡ ಹೆಚ್ಚು ಹೆಚ್ಚಾಗಿ ಬೆಳೆದುಕೊಂಡು ಬರುತ್ತದೆ. ಇದು ನಾನು ಹೇಳುವುದು ಸೂಕ್ತವೇನೊ ಗೊತ್ತಿಲ್ಲ. ನಾನು ಮೇಯರ್ ಆಗಿದ್ದಾಗ ಬೆಂಗಳೂರು ನಗರದಲ್ಲಿ ಇದ್ದಂತಹ ಹೋರ್ಡಿಂಗ್ಸ್‌ನ್ನೆಲ್ಲಾ ಇನ್ಸ್‌ಪೆಕ್ಟ್ ಮಾಡಿ ಸಾಕಷ್ಟು ತೆಗೆದುಹಾಕಿದ್ದೇನು. ಈಗ ಇಲ್ಲೀಗಲ್ಲಾಗಿ ಬಹಳ ಮಟ್ಟಿಗೆ ಹೋರ್ಡಿಂಗ್ಸ್ ಬರುತ್ತಿವೆ. ಇದರಲ್ಲಿ ಯಾವುದೇ ಒಂದು ವೆಸ್ಟೆಡ್ ಇಂಟರೆಸ್ಟ್ ಜಾಸ್ತಿಯಾಗಿ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಕೂಡ ಹೇಳಬೇಕಾಗಿದೆ.

ಏಕೆಂದರೆ, ನಮಗೆ ಬಂದಿರತಕ್ಕ ಅಂಕಿಅಂಶಗಳ ಪ್ರಕಾರ ನಮಗೆ 100 ಕೋಟಿಗಿಂತಲೂ ಹೆಚ್ಚಿಗೆ ಇರತಕ್ಕ ಆದಾಯದಲ್ಲಿ ಕೇವಲ 16 ಲಕ್ಷ ರೂಪಾಯಿ ಮಾತ್ರ ಈ ಬಾಬಿನಿಂದ ಬರುತ್ತಿದೆ. ಇದಕ್ಕಾಗಿ ಬೆಂಗಳೂರು ನಗರದ ಸೌಂದರ್ಯವನ್ನು, ಬೆಂಗಳೂರು ನಾಗರೀಕರ ರಕ್ಷಣೆಯನ್ನು ನಾವು ಕೈ ಬಿಡುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಪೋರ್ಡಿಂಗ್ಸ್ ಲೀಸ್ ಅಮೌಂಟ್ ನಮಗೆ ಬೇಡ, ಜಾಹಿರಾತಿನ ಹಣ ಕೂಡ ನಮಗೆ ಬೇಡ. ಇದನ್ನೆಲ್ಲಾ ಬಿಟ್ಟರೆ ಬೆಂಗಳೂರು ನಗರದಾದ್ಯಂತ ಸಂಚಾರದಲ್ಲಿ ಶಾಂತಿಯುತ ವಾತಾವರಣ ಉಂಟಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ಈಗಾಗಲೇ ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಎಲ್ಲೆಲ್ಲಿ ಈ ರೀತಿ ಟ್ರಾಫಿಕ್ ಪೆಡೆಸ್ಟ್ರಿಯನ್ ಮತ್ತು ಟ್ರಾಫಿಕ್‌ಗೆ ಅಡಚಣೆ ಬರುತ್ತದೆ ಅಂಥ ಕಡೆ ಟ್ರಾಫಿಕ್ ಪೋಲೀಸರನ್ನು ಕೇಳಿ ಅವರಿಂದ ಅನುಮತಿಯನ್ನು ತೆಗೆದುಕೊಂಡೇ ಇನ್ನು ಮುಂದೆ ಹೋರ್ಡಿಂಗ್ಸ್ ಹಾಕಿಸುತ್ತೇವೆ. ಇನ್ನು ಸೌಂದರ್ಯದ ವಿಚಾರದಲ್ಲಿ ಕೂಡ ಅರ್ಬನ್ ಆರ್ಟ್ಸ್ ಕಮೀಷನರ್‌ರವರ ಅಭಿಪ್ರಾಯವನ್ನು ತೆಗೆದುಕೊಂಡು ಹೋರ್ಡಿಂಗ್ಸ್‌ನ್ನು ಹಾಕಿಕೊಳ್ಳುವುದಕ್ಕೆ ಅನುಮತಿ ಕೊಡುತ್ತೇವೆ.

ಕುಂದಗೋಳ ನಗರಕ್ಕೆ ಕುಡಿಯುವ ನೀರಿನ ಸರಬರಾಜು.

108 (110) ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೋಳ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕುಂದಗೋಳ ನಗರದ ಜನತೆಗೆ ಕುಡಿಯುವ ನೀರಿನ ಸರಬರಾಜನ್ನು ಎಷ್ಟು ದಿವಸಗಳಲ್ಲಿ ಒದಗಿಸಲಾಗುವುದು?
2. ಈ ನೀರು ಸರಬರಾಜು ಕೆಲಸ ಯಾವ ಹಂತದಲ್ಲಿ ಇದೆ?
3. ಅದನ್ನು ಬೇಗ ಮುಗಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

1. ಮಾರ್ಚ್ 1992 ಅಂತ್ಯದೊಳಗೆ
2. ಎಲ್ಲಾ ಕಾಮಗಾರಿಗಳು ಮುಗಿಯುವ ಹಂತದಲ್ಲಿವೆ.
3. ಹೌದು - ಮಾರ್ಚ್ 1992ಕ್ಕೆ

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್:- ಸ್ವಾಮಿ, ಕುಂದಗೋಳ ನಗರವು ಕುಡಿಯುವ ನೀರಿನ ಸಮಸ್ಯೆಯನ್ನು ಬಹಳ ದಿವಸದಿಂದ ಎದುರಿಸುತ್ತಿದೆ. ಆದರೆ ತಮ್ಮ ಉತ್ತರದಲ್ಲಿ ಮಾರ್ಚಿ ಅಂತ್ಯದೊಳಗೆ ಈ ಕೆಲಸವನ್ನು ಮಾಡಿ ಕೊಡುತ್ತೇವೆಂದು ಹೇಳಿದ್ದೀರಿ. ಬಹುಶಃ ಅಷ್ಟರೊಳಗೆ ಈ ಕೆಲಸ ಮುಗಿಯುವುದಿಲ್ಲ. ಆದುದರಿಂದ ಪುನಃ ಅವರನ್ನು ಕರೆಸಿ ಮಾರ್ಚಿಯೊಳಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತೇವೆಂದು ಹೇಳುತ್ತಿದ್ದೀರಿ. ತಾವು ಮಾರ್ಚಿ ಅಂತ್ಯದೊಳಗೆ ಕುಡಿಯುವ ನೀರನ್ನೊದಗಿಸಿದರೆ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ನಿನ್ನೆ ತಾನೆ ನಮ್ಮ ಛೇರ್ಮನ್ ಮತ್ತು ಎಂ.ಡಿ. ಯವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ತಿಂಗಳ ಅಂತ್ಯದೊಳಗೆ ಇದನ್ನು ಪ್ರಾರಂಭ ಮಾಡುತ್ತೇವೆ.

ರಾಜ್ಯದಲ್ಲಿರುವ ರಾಸಾಯನಿಕ ಘಟಕಗಳ ಸಂಖ್ಯೆ

109 (791) ಶ್ರೀ ಎಸ್. ಜಯಣ್ಣ (ಚಳ್ಳಕೆರೆ):- ಮಾನ್ಯ ಗೃಹ ಹಾಗೂ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?